# ‘ಸ್ವಯಂ ಕಲಿಕೆಯಿಂದ ಕಲಾವಿದಳಾದೆ



**ಅಮಿತಾ ಸದಾಶಿವ**
ಕಲರ್ಸ್ ಕನ್ನಡದ ‘ಒಲವಿನ ನಿಲ್ದಾಣ’ದ ತಾರಿಣಿ

◆ **‘ಒಲವಿನ ನಿಲ್ದಾಣ’ದಲ್ಲಿ ನಿಮ್ಮ ಪಾತ್ರ ಏನು?**

ತಾರಿಣಿ ಎಂಬ ಪ್ರಧಾನ ಪಾತ್ರವನ್ನು ನಿರ್ವಹಿಸುತ್ತಿದ್ದೇನೆ. ಆಕೆ ಕಾಲೇಜು ಶಿಕ್ಷಣಕ್ಕೆಂದು ಬೆಂಗಳೂರಿಗೆ ಬಂದಿದ್ದಾಳೆ. ಮಲೆನಾಡಿನ ಹೊಸಹಳ್ಳಿ ಎಂಬ ಪುಟ್ಟಹಳ್ಳಿ ಆಕೆಯ ಊರು. ತಾತ ಅಂದರೆ ತುಂಬ ಇಷ್ಟ. ಸಹಜವಾಗಿ ತನ್ನ ಕುಟುಂಬದ ಜೊತೆ ಭಾವುಕ ಬಾಂಧವ್ಯವನ್ನು ಹೊಂದಿದ್ದಾಳೆ. ಬೌದ್ಧಿಕವಾಗಿ ಪ್ರೌಢಿಮೆಯನ್ನು ಹೊಂದಿರುವ ಆಕೆ ಈ ಸಂಬಂಧಗಳ ಭಾವನೆಗಳ ವ್ಯವಹಾರವನ್ನು ಹೇಗೆ ನಿರ್ವಹಿಸುತ್ತಾಳೆ ಎನ್ನುವುದು ಕಥೆ. ಕೇವಲ ಹತ್ತು ಹನ್ನೆರಡು ದಿನಗಳ ಚಿತ್ರೀಕರಣ ಆಗಿದೆ.

◆ **ನಟಿ ಆಗುವವರೆಗಿನ ಬೆಳವಣಿಗೆ ಹೇಳಿ.**

ಅದಕ್ಕೆ ದೀರ್ಘ ಕತೆಯೇ ಇದೆ. ನಾನು ಮೂಲತಃ ಮಂಗಳೂರಿನವಳು. ಮಾಡೆಲಿಂಗ್ ಹುಚ್ಚಿಗೆ ಮುಂಬೈಗೆ ಹೋದೆ. ಅಲ್ಲಿ ಹೋದ ನಂತರ ಸಾಕಷ್ಟು ಜಾಹೀರಾತು– ಫ್ಯಾಷನ್ ಶೋಗಳಲ್ಲಿ ಕಾಣಿಸಿಕೊಂಡಿದ್ದೇನೆ. ಅಲ್ಲಿಗೆ ಹೋದಮೇಲೆ ಸ್ನೇಹಿತರಿಂದ ರಂಗಭೂಮಿ ಪರಿಚಯ ಆಯಿತು. ನಟನೆಯನ್ನು ಏಕೆ ಮಾಡಬಾರದು ಎನ್ನುವ ಸಲಹೆ ಬಂತು. ಅಲ್ಲಿಯತನಕ ನಟಿ ಆಗಬೇಕು ಎನ್ನುವ ಕಲ್ಪನೆಯೂ ಇರಲಿಲ್ಲ. ‘ಬಾಲಾಜಿ ಟೆಲಿಫಿಲ್ಮ್’ಗೆ ಹಿಂದಿ ಸೀರಿಯಲ್‌ಗೆ ಮೊದಲು ಆಡಿಷನ್ ನೀಡಲು ಹೋದೆ. ಹೋದಾಗ ಮುಖ ನೋಡಿದ ತಕ್ಷಣ, ‘ಫಿಟ್ ಆರ್ ನಾನ್ ಫಿಟ್’ ಅಂತ ಮಾತ್ರ ಹೇಳುತ್ತಿದ್ದರು. ಮೊದಲ ದಿನ ಅನ್‌ಫಿಟ್ ಅಂದರು. ಎರಡನೇ ದಿನ ಮತ್ತೆ ಹೋದೆ. ಮೊದಲ ಹಂತದಲ್ಲಿ ಫಿಟ್ ಆಗಿ ಆಡಿಷನ್ ನೀಡಿದೆ. ಆಗಲಿಲ್ಲ, ಆಡಿಷನ್ ನೀಡುವುದನ್ನು ಮುಂದುವರಿಸಿದೆ.

ಫ್ಯಾಷನ್ ಶೋ ಒಂದಕ್ಕೆ ಬೆಂಗಳೂರಿಗೆ ಬಂದಾಗ ಕನ್ನಡ ಸಿನಿಮಾದಲ್ಲಿ ನಟಿಸುತ್ತೀರಾ ಎನ್ನುವ ಪ್ರಶ್ನೆ ಬಂತು. ಕನ್ನಡಿಗಳಾಗಿ ಏಕೆ ಆಗಲ್ಲ ಎನ್ನಲಿ ಎಂದೆ. ಸೃಜನ್ ಲೋಕೇಶ್ ಅವರ ‘ಹ್ಯಾಪಿ ಜರ್ನಿ’ಯಲ್ಲಿ ಒಂದು ಅವಕಾಶ ಸಿಕ್ಕಿತು. ನಂತರ ‘ಗಿಫ್ಟ್ ಬಾಕ್ಸ್’, ಈಗ ಟೀವಿಗೆ ಬಂದಿದ್ದೇನೆ. ತೆಲುಗಿನಲ್ಲಿಯೂ ಒಂದು ಧಾರಾವಾಹಿ ಮಾಡುತ್ತಿದ್ದೇನೆ.

◆ **ಮಾಡೆಲಿಂಗ್ ಹಾದಿಯನ್ನು ಹಿಡಿದಿದ್ದು ಹೇಗೆ?**

ನನಗಾಗ 13 ವರ್ಷ. ಮಾಡೆಲಿಂಗ್ ನೋಡಿ ಹೀಗೆ ಬಣ್ಣ ಬಣ್ಣದ ಬಟ್ಟೆ ಹಾಕಿಕೊಂಡು ಹೋಗಬೇಕು ಅಂತಿದ್ದೆ. ಅದು ಏನು ಎಂದೂ ಗೊತ್ತಿರಲಿಲ್ಲ. ಆಗ ನನ್ನ ಅಪ್ಪ ಇದೆಲ್ಲ ನಮಗಲ್ಲ. ಶ್ರೀಮಂತರು ಮಾಡುವಂತಹದ್ದು ಎಂದು ಹೇಳುತ್ತಿದ್ದರು. ತುಂಬ ಇಷ್ಟ ಆಗ್ತಾ ಇತ್ತು. ಒಂದೆರಡು ವರ್ಷ ಅದರ ಹುಡುಕಾಟ ಆರಂಭಿಸಿದೆ. ಬೇರೆ ಬೇರೆ ಪತ್ರಿಕೆಗಳ ಕಟ್ಟಿಂಗ್‌ಗಳನ್ನು ಸಂಗ್ರಹಿಸಿದೆ. ಆಗ 16 ವರ್ಷ. ಅಪ್ಪನಿಗೆ ತೋರಿಸಿದೆ. ಸ್ಟೇಜ್ ಮೇಲೆ ನಡೆದುಕೊಂಡು ಹೋಗಬೇಕು ಎನ್ನುವ ಹಟವನ್ನು ನೋಡಿ ನನ್ನನ್ನು ಮುಂಬೈಗೆ ಕಳುಹಿಸಿದರು. ಸುಮಾರು ಏಳೆಂಟು ದಶಕದ ಹಿಂದೆ ನನ್ನ ತಾಯಿ ಪೋಷಕರು ಅಲ್ಲಿಗೆ ಹೋಗಿ ನೆಲೆಸಿದ್ದರು. ಆರಂಭದಲ್ಲಿ ಅಲ್ಲಿ ಒಳ್ಳೆಯ ಸಂಘಟಕಿ ಸಿಕ್ಕರು. ಅವರಿಂದ ಸಹಾಯವಾಯಿತು. ಅಪಾಯದ ಸಂದರ್ಭಗಳನ್ನೂ ಅಲ್ಲಿ ಎದುರಿಸಿದ್ದೇನೆ. ನಟನೆ ಬಗ್ಗೆ ಯೋಚನೆಯನ್ನೇ ಮಾಡಿರಲಿಲ್ಲ. ಈ ವಿಷಯದಲ್ಲಿ ನನಗೆ ನಾನೇ ಗುರು. ಬಿಟ್ಟರೆ ಅಪ್ಪ ಸದಾಶಿವ ಬಂಗೇರ (ನಿವೃತ್ತ ಬ್ಯಾಂಕ್ ಅಧಿಕಾರಿ), ಅಮ್ಮ ವೇದಾವತಿ ಎಸ್ ಬಂಗೇರ (ರಾಜ್ಯ ಸರ್ಕಾರಿ ಉದ್ಯೋಗಿ) ಅವರ ಪ್ರೋತ್ಸಾಹ. ಅಮ್ಮ ತಿಂಗಳ ಹಿಂದಷ್ಟೇ ತೀರಿಹೋದರು. ಸ್ವ ಪ್ರಯತ್ನದಿಂದ ಕಲಿತು ರಂಗಭೂಮಿ– ಮಾಡೆಲಿಂಗ್– ಬೆಳ್ಳಿತೆರೆ– ಕಿರುತೆರೆಯಲ್ಲಿ ಕೆಲಸ ಮಾಡುತ್ತಿದ್ದೇನೆ.

◆ **ಮಗುವಿನಂತೆ ಕಾಣುವ ನೀವು ಪ್ರಭುತ್ವ ಪಾತ್ರಕ್ಕೆ ಹೇಗೆ ಸಜ್ಜಾಗುತ್ತೀರಿ?**

ಪಾತ್ರ ಎದುರಾದಾಗ ಹೀಗೆ ಇರಲ್ಲ. ‘ಗಿಫ್ಟ್ ಬಾಕ್ಸ್’ ಸಿನಿಮಾ ಮಾಡುವಾಗ ರಂಗಾಯಣದಲ್ಲಿ ತರಬೇತಿ ಸಿಕ್ತು. ಅಲ್ಲಿ ಒಂದು ಪಾತ್ರವನ್ನು ಹೇಗೆ ಒಳಗೊಳ್ಳಬೇಕು ಎನ್ನುವುದನ್ನು ಕಲಿತೆ. ನಟನೆಯಲ್ಲಿ ಧ್ವನಿ ಕೂಡ ತಂತ್ರ. ಈಗ ನಾನು ಮಾತನಾಡುತ್ತಿದ್ದೇನೆ. ನಾನು ಪಾತ್ರ ಆದಾಗ ಪಾತ್ರವೇ ಮಾತನಾಡುತ್ತದೆ. ಆಗ ನನ್ನ ಧ್ವನಿಯ ಏರಿಳಿತವೇ ಭಿನ್ನವಾಗುತ್ತದೆ. ನಾನು ಧಾರಾವಾಹಿ ಮಾಡ್ತೀನಿ ಅಂತ ಅಂದು ಭಾವಿಸಿರಲಿಲ್ಲ. ಮಾಡುತ್ತಿದ್ದೇನೆ. ಹಿಂದಿಯ ಒಂದು ನಾಟಕದಲ್ಲಿ 35 ವರ್ಷದ ಹೆಂಗಸಿನ ಪಾತ್ರವನ್ನೂ ಮಾಡಿದ್ದೇನೆ. ಪಾತ್ರಕ್ಕೆ ತಕ್ಕಂತೆ ತಯಾರಿ ಆಗಲೇಬೇಕು. ಅವಕಾಶಗಳು ಸಾಕಷ್ಟು ಸಿಕ್ಕಿವೆ. ಅದನ್ನು ಸದುಪಯೋಗ ಮಾಡಿಕೊಂಡಿದ್ದೇನೆ ಎನ್ನುವ ತೃಪ್ತಿಯೂ ಇದೆ. ಪಾತ್ರ ಬಯಸಿದಂತೆ ಧ್ವನಿ–ಅಭಿನಯ ರೂಪಿಸಿಕೊಳ್ಳುವುದು ಅಭಿನಯದ ಮೂಲತತ್ವ ಎಂದು ಅರಿತಿದ್ದೇನೆ.

◆ **ಬೆಂಗಳೂರಿಗೆ ಹೋಲಿಸಿದರೆ ಮುಂಬೈ ಜೀವನ ಹೇಗಿತ್ತು?**

ತುಂಬ ಅಂತರ ಇದೆ. ನನ್ನ ತಾಯ್ನಾಡು ಕರ್ನಾಟಕ. ನನ್ನ ಮಾತೃ ಭಾಷೆ ತುಳು. ಅಲ್ಲಿನ ನೀರು ಚೆನ್ನಾಗಿ ಹಿಡಿಸಿತ್ತು. ಬೆಂಗಳೂರು ಸ್ವಲ್ಪ ಕಷ್ಟ ಅನಿಸಿದ್ದಿದೆ. ಇಲ್ಲಿನ ಆಹಾರ ಕರಾವಳಿಯಂತೆ ಇರಲ್ಲ. ಹೊಂದಿಸಿಕೊಳ್ಳಲು ಕಷ್ಟ ಆಯಿತು. ಆರಂಭದಲ್ಲಿ ಊಟೋಪಚಾರದಿಂದ ಸ್ವಲ್ಪ ತೊಂದರೆ ಆಗಿತ್ತು. ಆದರೂ ಕರ್ನಾಟಕವೇ ಇಷ್ಟ. ಕಲಾವಿದರೊಬ್ಬರು ಹೇಳಿದಂತೆ ನನಗೆ ಮಂಗಳೂರು ಜನ್ಮಭೂಮಿ, ಬೆಂಗಳೂರು ಕರ್ಮಭೂಮಿ.

■ **ರಾಘವೇಂದ್ರ ಕೆ.**